## ಅಂಗೈಯಲ್ಲಿ ಅರಮನೆ

### ಅಪ್ಪನಿಗೆ ತಕ್ಕ ಮಗ

ಬಿರು ಬೇಸಿಗೆಯ ಒಂದು ದಿನ, ಜಿಪುಣ ರಾಮಲಾಲ್ ಮನೆಗೆ ಒಬ್ಬ ಅತಿಥಿ ಬಂದಿದ್ದ. ಆತನನ್ನು ಸ್ವಾಗತಿಸಿದ ರಾಮಲಾಲ್ ಕೂರಲು ಹೇಳಿ, 'ಕುಡಿಯಲು ಏನು ತಗೋತೀರಿ' ಎಂದ.

ಅತಿಥಿ 'ಏನೂ ಬೇಡ ಒಂದು ಲೋಟ ಲಿಂಬೆ ಪಾನಕ ಸಾಕು' ಎಂದ. ರಾಮಲಾಲ್ ಮಗನಿಗೆ ಒಳಗೆ ಕರೆದು 'ಮಾರ್ಕೆಟ್‌ಗೆ ಹೋಗಿ ಒಳ್ಳೆ ಐದಾರು ನಿಂಬೆಹಣ್ಣು ತೆಗೆದುಕೊಂಡು ಬಾ' ಎಂದ. 'ಆಯಿತು' ಎಂದು ಹೋದ ಮಗ ಸುಮಾರು ಒಂದು ಗಂಟೆಯ ನಂತರ ಖಾಲಿ ಕೈಯಲ್ಲಿ ಹಿಂತಿರುಗಿದ್ದನ್ನು ಕಂಡ ರಾಮಲಾಲ್ 'ಯಾಕೆ ಖಾಲಿ ಕೈಯಲ್ಲಿ ಬಂದೆ' ಎಂದು ಪ್ರಶ್ನಿಸಿದಾಗ ಆತ 'ಅಯ್ಯೋ ಅಪ್ಪಾ.. ಎಲ್ಲಾ ಕಡೆ ಸುತ್ತಿದೆ.. ಎಲ್ಲೂ ನಿಂಬೆಹಣ್ಣು ಸಿಗ್ಲಿಲ್ಲ' ಎಂದ.

ಅಷ್ಟಕ್ಕೇ ಸುಮ್ಮನಿರದ ಆತನ ಅಪ್ಪ, 'ಅದ್ಸರಿ ಇಷ್ಟೊತ್ತು ಸುತ್ತಿ ಬಂದೆಯಲ್ಲ ನಿನ್ನ ಚಪ್ಪಲಿ ಎಷ್ಟು



ಸವೀತು ಗೊತ್ತಾ' ಎಂದು ಕೇಳಿದಾಗ ಮಗರಾಯ, 'ಅಪ್ಪಾ ನಾನು ಅತಿಥಿಯ ಚಪ್ಪಲಿ ಹಾಕ್ಕೊಂಡು ಹೋಗಿದ್ದೆ' ಎಂದು ಉತ್ತರಿಸಿದಾಗ, ರಾಮಲಾಲ್ ಒಳಗೊಳಗೇ,'ಅಪ್ಪನಿಗೆ ತಕ್ಕ ಮಗ' ಎಂದುಕೊಂಡ.

**ಅರವಿಂದ ಜಿ.ಜೋಷಿ**

---



ಕಲೆ: ಗಣೇಶ ಆಚಾರ್ಯ

### ಫಿಂಗರಲೆಸ್ ಚಹಾ!

ಚಹಾ ಕುಡಿಯಲು ಹೋದಾಗ ನಡೆದ ಪ್ರಸಂಗ. ನಾನು ನನ್ನ ಸ್ನೇಹಿತ ಚಹಾ ಕುಡಿಯಲು ಅಂಗಡಿಗೆ ಹೋಗಿದ್ವಿ. ಗಾಜಿನ ಗ್ಲಾಸುಗಳಲ್ಲಿ ಚಹಾ ನೀಡಿದರು. ಕುಡಿಯುತ್ತಾ ಕುಳಿತೆವು. ನಮ್ಮ ಎದುರಿಗೆ ಕೂತ ವ್ಯಕ್ತಿ 'ಅಣ್ಣಾ ಒಂದು ಫಿಂಗರಲೆಸ್ ಚಹಾ ಕೊಡು' ಎಂದರು.

ಶುಗರ್‌ಲೆಸ್ ಚಹಾ ಕೇಳಿದ್ವಿ. ಇದೇನಿದು ಫಿಂಗರಲೆಸ್ ಚಹಾ ಅಂದುಕೊಂಡೆ. 'ಆಯ್ತಣ್ಣಾ ಗ್ಲಾಸಲ್ಲಿನ ಚಹಾಕ್ಕೆ ಬೆರಳು ತಾಕದ ಹಾಗೆ ತಂದುಕೊಡ್ತೀನಿ' ಎಂಬ ಉತ್ತರ ಬಂತು. ಮೂರ್ನಾಲ್ಕು ಚಹಾದ ಗ್ಲಾಸು ಒಮ್ಮೆಲೆ ಒಂದೇ ಕೈಯಲ್ಲಿ ತರುವಾಗ ಕೆಲವೊಮ್ಮೆ ಕೈಬೆರಳುಗಳು ಚಹಾದಲ್ಲಿ ಮುಳುಗುವುದರಿಂದ ಹಾಗೆ ಮಾಡಬೇಡ ಎಂಬ ಅರ್ಥದಲ್ಲಿ ಹೇಳಿದ್ದಾರೆಂದು ತಿಳಿಯಿತು. ನಾವೂ ಹಾಗೆಯೇ ಹೇಳಬೇಕಾಗಿತ್ತೆಂದು ನಕ್ಕೆವು.

**ನರಸಿಂಹಾರೆಡ್ಡಿ ಯಂಕಾಮೋಳ**